ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 11/3/2021

## ಸಣ್ ಸುದ್ದಿ

# ಸಚಿವರೇ ಇಲ್ಲದ್ದಕ್ಕೆ ಕಲಾಪ 15ಕ್ಕೆ ಮುಂದೂಡಿಕೆ!

ಕ.ಪ್ರ. 11/3/21

ವಿಧಾನ ಪರಿಷತ್: ವಿಧಾನಪರಿಷತ್ತಿನಲ್ಲಿ ಒಬ್ಬ ಸಚಿವರನ್ನು ಬಿಟ್ಟು ಇನ್ನಾರೂ ಹಾಜರಿರದ ಕಾರಣ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದ ಪ್ರಸಂಗ ಬುಧವಾರ ನಡೆಯಿತು. ಸಚಿವರೆಲ್ಲರೂ ಮಂತ್ರಿ ಆರ್. ಶಂಕರ್ ಅವರ ಮನೆಗೆ ಊಟಕ್ಕೆ ಹೋಗಿದ್ದೇ ಇದಕ್ಕೆ ಕಾರಣ. ಬುಧವಾರ ಮಧ್ಯಾಹ್ನ ಊಟದ ವಿರಾಮದ ಬಳಿಕ ಆರಂಭವಾದ ಕಲಾಪದಲ್ಲಿ ಬಜೆಟ್ ಮೇಲಿನ ಚರ್ಚೆಗೆ ಸಭಾಪತಿ ಬಸವರಾಜ ಹೊರಟ್ಟಿ ಅವಕಾಶ ಕಲ್ಪಿಸಿದರು. ಈ ವೇಳೆ ಕಾಂಗ್ರೆಸ್‌ನ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಬಜೆಟ್ ಕುರಿತು ಮಾತನಾಡಲು ಮುಂದಾದಾಗ ಕಲಾಪದಲ್ಲಿ ಸಭಾನಾಯಕ ಕೋಟಾ ಶ್ರೀನಿವಾಸಪೂಜಾರಿ ಹಾಗೂ ಬೆರಳೆಣಿಕೆ ಸದಸ್ಯರನ್ನು ಹೊರತುಪಡಿಸಿ ಯಾವೊಬ್ಬ ಸಚಿವರೂ ಹಾಜರಿರಲಿಲ್ಲ. ಇದಕ್ಕೆ ಆಕ್ಷೇಪಿಸಿದ ವಿಪಕ್ಷ ನಾಯಕ ಎಸ್.ಆರ್.ಪಾಟೀಲ್, 'ಬಜೆಟ್ ಕುರಿತು ಚರ್ಚೆ ಮಾಡುವಾಗ ಸಚಿವರೂ ಇಲ್ಲ. ನಾವು ಕಂಠ ಶೋಷಣೆ ಮಾಡಿಕೊಂಡು ಗೋಡೆಗೆ ಮಾತನಾಡಬೇಕಾ? ಎಂದು ಕಿಡಿಕಾರಿದರು. ಆಗ ಸಚಿವ ಪೂಜಾರಿ ಎದ್ದು ನಿಂತು, 'ಎಲ್ಲ ಸಚಿವರು ಸಚಿವ ಆರ್.ಶಂಕರ್ ಅವರ ಮನೆಗೆ ಊಟಕ್ಕೆ ಹೋಗಿದ್ದಾರೆ. ಐದು-ಹತ್ತು ನಿಮಿಷದಲ್ಲಿ ಬರಲಿದ್ದಾರೆ' ಎಂದರು. ಬಳಿಕ ಸಭಾಪತಿಗಳು ಸೋಮವಾರ ಬೆಳಗ್ಗೆ 10 ಗಂಟೆ ವರೆಗೆ ಕಲಾಪವನ್ನು ಮುಂದೂಡಿದರು.